MS – 036

2

BCA (Fresh + Repeater CBCS)

ಎರಡನೇ ಸೆಮಿಸ್ಟರ್ ಬಿ.ಸಿ.ಎ. ಪರೀಕ್ಷೆ, ಮೇ 2016

(ಫ್ರೆಷರ್ಸ್ + ರಿಪೀಟರ್ಸ್) (CBCS) (2014 – 15 & Onwards)

ಕನ್ನಡ ಭಾಷಾ ಪತ್ರಿಕೆ – II

ಸುವರ್ಣ ಸಂಪದ ಮತ್ತು ಶ್ಮಶಾನ ಕುರುಕ್ಷೇತ್ರ

Time : 3 Hours                                                                                    Max. Marks : 70

I. ಅ) ಈ ಪದ್ಯದ ಭಾವಾರ್ಥವನ್ನು ಬರೆಯಿರಿ. **(1×6=6)**

ಇಪ್ಪತ್ತ ಐದಿಂದು ನಾನಿನ್ನು ಯುವಕ
ಮಣ್ಣಿನವ ನನಗೇಕೆ ಆಗಸದ ಮರುಕ ?
ಮೊರೆ ಕೊರೆಯಲೆಂದಿಲ್ಲಿ ಬಂದು ನಾ ನಿಂತಿಲ್ಲ,
ಗೋಳ ಕಂತೆಯ ಬಿಚ್ಚಲದನಿಲ್ಲಿ ತಂದಿಲ್ಲ
ಕಡೆಗಣ್ಣ ಕೃಪೆಗಾಗಿ ಯಾಚಿಸುತ ಕೈಕಟ್ಟಿ
ಕದವೆಂದು ತೆರೆದೀತೋ ಎಂದು ನಿಟ್ಟುಸಿರಟ್ಟಿ
ಕಾದು ನಾ ಕುಸಿದಿಲ್ಲ; ಪೂಜಿಸಿದ್ದೂ ಇಲ್ಲ ನಿನ್ನ ಸತತ.

ಆ) ಎರಡನ್ನು ಕುರಿತು ಟಿಪ್ಪಣಿ ಬರೆಯಿರಿ. **(2×2=4)**

ನವ್ಯಕಾವ್ಯ, ಅನ್ಯದೇಶ್ಯ ಶಬ್ದ, ಲಲಿತಾ ಸಿದ್ಧಬಸವಯ್ಯ, ಮೂಡ್ನಾಕೂಡು ಚಿನ್ನಸ್ವಾಮಿ.

ಇ) **ಒಂದು** ಪ್ರಶ್ನೆಗೆ ವಿವರವಾಗಿ ಉತ್ತರಿಸಿ. **(1×10=10)**

1) ಅಸ್ಪೃಶ್ಯತೆಯ ಅಮಾನವೀಯತೆ ಮೂಡ್ನಾಕೂಡು ಅವರ ಕವನದಲ್ಲಿ ಹೇಗೆ ಚಿತ್ರಿತಗೊಂಡಿದೆ ?
2) 'ಕದ್ದರೆಂದು' – ಕವನದ ಆಶಯವನ್ನು ವಿವರಿಸಿ.

II. ಅ) **ಎರಡು** ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ. **(2×5=10)**

1) ಯುಗಪುರುಷ ದ್ವಾಪರ ತನ್ನ ಅಧಿಕಾರವನ್ನು ಕಲಿದೇವನಿಗೆ ವಹಿಸಿಕೊಟ್ಟ ಸಂದರ್ಭ.
2) ಬಾಳು ಏನೆಂಬುದನ್ನು ಅರಿಯದಿಹ ಕೂಸಿಗೆ ಸಾವಿನ ಪರಿಚಯ ಮಾಡಿಕೊಡುವ ಹೃದಯ ವಿದ್ರಾವಕ ಸನ್ನಿವೇಶ.
3) ದುರ್ಯೋಧನನ ಬಗ್ಗೆ ಆತನ ಕಿಂಕರರು ವ್ಯಕ್ತಪಡಿಸಿದ ಭಾವನೆಗಳು.

P.T.O.

ಆ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿ. **(1×10=10)**

1) 'ವಿನಾಶದ ಗರ್ಭದಲ್ಲಿಯೇ ವಿನೂತನ ಸೃಷ್ಟಿಯ ಬೀಜವೂ ಅಡಗಿದೆ' – ಎಂಬುದು ನಾಟಕದಲ್ಲಿ ಹೇಗೆ ರೂಪಿತವಾಗಿದೆ ? ವಿವರಿಸಿ.

2) ದುರ್ಯೋಧನನ ಮೇರುಗುಣ ಈ ನಾಟಕದಲ್ಲಿ ಹೇಗೆ ಚಿತ್ರಿತವಾಗಿದೆ ? ವಿವರಿಸಿ.

III. ಅ) ಒಂದು ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿ. **(1×5=5)**

1) ಆಧುನಿಕ ಮಾರುಕಟ್ಟೆಯಲ್ಲಿ ಜಾಹೀರಾತುಗಳ ಪಾತ್ರ.

2) ಜೇಕಬ್, 'ಗಾಡ್ಲಿಮ್ಯಾನ್' ಆದುದು ಹೇಗೆ ?

ಆ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿ. **(1×10=10)**

1) ಮಂಗಗಳನ್ನು ಹಿಡಿಯುವಲ್ಲಿ ಯಶಸ್ವಿಯಾದ ಗಾಡ್ಲಿ ತಾನೇ ಪಂಜರದೊಳಗೆ ಬಂಧಿಯಾದುದು ಹೇಗೆ ? ವಿವರಿಸಿ.

2) ಜಾತೀಯತೆಯ ನಿರ್ಮೂಲನೆಗಾಗಿ ನಡೆದ ಆಂದೋಲನಗಳ ಸ್ವರೂಪವನ್ನು ಚರ್ಚಿಸಿ.

IV. ಅ) ಒಂದು ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿ. **(1×5=5)**

1) ರಿಮೇಕ್ ಎನ್ನುವುದು ಸೃಜನಶೀಲತೆಗೆ ಮಾರಕವೇ ?

2) ಶಕುಂತಲಾದೇವಿ ಅವರನ್ನು ಪರಿಚಯಿಸಿ.

ಆ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿ. **(1×10=10)**

1) ವಿಶ್ವಕನ್ನಡ. ಕಾಂ.ನ ಡಾ. ಯು. ಬಿ. ಪವನಜ ಅವರ ಸಾಧನೆಗಳೇನು ? ವಿವರಿಸಿ.

2) ಕನ್ನಡದಲ್ಲಿ ಮಾಹಿತಿ ತಂತ್ರಜ್ಞಾನವನ್ನು ಪ್ರಚುರಪಡಿಸಲು ಕನ್ನಡಿಗರು ಮಾಡಬೇಕಾದ ಪ್ರಯತ್ನಗಳಾವುವು ? ವಿವರಿಸಿ.

---